ಶ್ರೀ ವಿ. ಮುನಿಯಪ್ಪ.—ಹೇಮಾವತಿ ಯೋಜನೆಯ ಎರಡನೆಯ ಹಂತದ ಕೆಲಸವಾದ ಮೇರೆ ಯಾವ್ಯಯಾವ ತಾಲ್ಲೂಕುಗಳಿಗೆ ಅದರ ಪ್ರಯೋಜನವಾಗುತ್ತದೆ?

Sri B. D. JATTI.—I have not got all those details.

ಶ್ರೀ ಜೆ. ದೇವಯ್ಯ.—ಈ ಮೂರು ಯೋಜನೆಗಳು ಯಾವ ಯಾವ ಜಿಲ್ಲೆಗಳಿಗೆ ಸೇರಿವೆ ?

ಶ್ರೀ ಬಿ. ಡಿ. ಜತ್ತಿ.—ಹಾರಂಗಿ ಯೋಜನೆ ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆ, ಆಪ್ಪರ್ ಕೃಷ್ಣಾ ಯೋಜನೆ ಮುಂಬಯಿ ಮತ್ತು ಹೈದರಾಬಾದು ಕರ್ನಾಟಕ, ಮಲಪ್ರಭ ಯೋಜನೆ ಧಾರವಾಡ ಮತ್ತು ಕೆಲಮಟ್ಟಿಗೆ ಬಿಜಾಪುರ ಜಿಲ್ಲೆಗಳಿಗೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.–ಹಾರಂಗಿ ಯೋಜನೆಗೆ 1963ನೆ ನವೆಂಬರಿನಿಂದ ಕ್ಲಿಯರೆನ್ಸ್ ದೊರೆತಿಲ್ಲ ಎಂದು ಹೇಳಿದೆ. ಈ ಮಧ್ಯೆ ತಳಪಾಯದ ಕೆಲಸ ವಗೈರೆ ಕೆಲಸಗಳು ಪ್ರಾರಂಭವಾಗಿವೆ. ಇದಕ್ಕೂ ನಾರಾಯಣಪುರ ಯೋಜನೆಯ ಗತಿಯೇ ತಾನೇ ?

ಶ್ರೀ ಬಿ. ಡಿ. ಜತ್ತಿ.—ನಾರಾಯಣಪುರದ ಬಳಿ ಕಟ್ಟಿರುವ ಕಟ್ಟಡಗಳು ವಗೈರೆ ಸಿದ್ದಾಪುರಕ್ಕೂ ಉಪಯೋಗವಾಗುತ್ತವೆ. ಅದೇ ರೀತಿ ಮಾನ್ಯ ಸದಸ್ಯರು ಹೇಳಿದ ಸಂದರ್ಭದಲ್ಲೂ ಉಪಯೋಗವಾಗುವುದು.

ಶ್ರೀ ಬಿ. ಚನ್ನಬೈರೇಗೌಡ.—ನಾರಾಯಣಪುರ ಅಣೆಕಟ್ಟಿಗಾಗಿ ಮೊದಲು ಹುನಾಯಿಸಿದ ಸೈಟಿನ ಬಳಿ ಕಟ್ಟಡ ವಗೈರೆ ನಿರ್ಮಿಸಿದ್ದು ಈಗ ಉಪಯೋಗವಿಲ್ಲದೆ ವ್ಯಥಾ ಹಣ ಖರ್ಚಾಗಿಲ್ಲವೆ?

ಶ್ರೀ ಬಿ. ಡಿ. ಜತ್ತಿ.—ಇಲ್ಲ. ಅಲ್ಲಿರುವ ಕಟ್ಟಡ ವಗೈರೆ ಈಗ ಸಿದ್ದಾಪುರಕ್ಕೂ ಉಪಯೋಗವಾಗುತ್ತವೆ. ಆದುದರಿಂದ ಆ ವಿಚಾರದಲ್ಲಿ ಯೋಜನೆ ಮಾಡಬೇಕಾದ ಅಗತ್ಯವಿಲ್ಲ.

ಶ್ರೀ ಎಸ್. ಎಸ್. ಕೊಳ್ಳೇಬೈಲ್.—ಹಾರಂಗಿ ಯೋಜನೆಯು 5ನೆಯ ಪಂಚವಾರ್ಷಿಕ ಯೋಜನೆಯ ಅಂತ್ಯದಲ್ಲಾದರೂ ಮುಗಿಯಬಹುದೇ ?

Sri B. D. JATTI.—I replied that all the major projects are likely to be completed by the end of the Fourth Five-Year Plan. But if it is the intention of the Hon'ble Member to take these up to the Fifth Plan, Government will consider.

(*Laughter*)

ಶ್ರೀ ಎಸ್. ಶಿವಪ್ಪ.—ನಾರಾಯಣಪುರದ ಯೋಜನೆಗೆ ಸಂಬಂಧಿಸಿದಂತೆ ಹಾಕಿರುವ ಅಸ್ತಿ ಭಾರ ಶಿಲೆ ಸೈಟನ್ನು ಸ್ಥಳಾಂತರಿಸುವುದರಿಂದ ಮುಳುಗಿ ಹೋಗುತ್ತದೆಯೇ ಅಥವಾ ಉಳಿಯುತ್ತದೆಯೆ

ಶ್ರೀ ಬಿ. ಡಿ. ಜತ್ತಿ.—ಆ ಶಿಲೆಯನ್ನೇ ಸಿದ್ದಾಪುರದ ಹತ್ತಿರ ತಂದಿಡಬಹುದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹೇಮಾವತಿ ಯೋಜನೆ ಪರಿಶೀಲನೆ ಯಾವಾಗ ಪ್ರಾರಂಭವಾಯಿತು ? ಯಾವಾಗ ಫೈನಲ್ಸ್ ಆಗುವುದು ?

ಶ್ರೀ ಬಿ. ಡಿ. ಜತ್ತಿ.—ಮೂರನೆಯ ಯೋಜನೆಯಲ್ಲಿ ತೆಗೆದುಕೊಳ್ಳಲಾಯಿತು.

ಶ್ರೀ ಎಂ. ಸಿ. ಬನಪ್ಪ.—ಮೂರನೆಯ ಯೋಜನೆಯಲ್ಲಿ 40 ಕೋಟಿ ರೂಪಾಯಿಗಳನ್ನು ಭಾರಿ ಯೋಜನೆಗಳಿಗಾಗಿ ಖರ್ಚು ಮಾಡಲು ಸರ್ಕಾರದ ಬಳಿ ತಕ್ಕಷ್ಟು ಸಿಬ್ಬಂದಿ ಇಲ್ಲವೇ ?

Sri B. D. JATTI.—We have sufficient staff to implement all the projects provided we get money and clearance from the Government of India.

Crops affeeted due to heavy rains under the Atchkat of Lingannanakere in Bangalore South Taluk.

**Q.*—289. Sri D. MUNICHINNAPPA (Bangalore South).—

Will the Government be pleased to state :—

(*a*) the extent of land under the atchkat of Lingannanakere in Bangalore South Taluk, wherein crops were washed away due to overflow of wasteweir on account of heavy rains in this year ;

(*b*) the action taken by them on the written representations made in this behalf;

(*c*) the steps taken by them to give relief to the ryots affected ?

A.—Sri M. V. KRISHNAPPA (Minister for Revenue).—

(*a*) 56 acres 32 and guntas.

(*b*) No written representations have been received in this behalf so far.

(*c*) No relief has been given to the ryots affected so far. The question of granting relief in deserving cases will be examined, if any of the affected ryots seek such relief.

ಶ್ರೀ ಡಿ. ಮುನಿಚಿನ್ನಪ್ಪ.—(ಬಿ) ಭಾಗಕ್ಕೆ ಉತ್ತರವಾಗಿ ಅರ್ಜಿಗಳು ಬಂದಿಲ್ಲ ಎಂದು ಅಪ್ಪಣೆ ಕೊಡಿಸಿದ್ದಾರೆ. ಮೂರು ವರ್ಷಗಳಿಂದ ಈ ಸಭೆಯಲ್ಲಿ ಹೇಳಿದ್ದೇನೆ, ಮಾನ್ಯ ನೀರಾವರಿ ಮಂತ್ರಿಗಳಿಗೆ ಮೂರು-ನಾಲ್ಕು ಸಲ ಅರ್ಜಿಯನ್ನು ಕೊಟ್ಟಿದ್ದೇನೆ. ಪ್ರಶ್ನೆಯನ್ನು ಕೂಡ ಕೇಳಿದ್ದೇನೆ. ಮಾಡಿಸಿಕೊಡುತ್ತೇನೆಂದು ಹೇಳಿ ಇವತ್ತಿನವರೆಗೂ ಮಾಡಿಲ್ಲ. ಕಾರಣವೇನು, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ನಷ್ಟಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಯನ್ನು ಹಾಕಿದ್ದಾರೆ. ನಷ್ಟದ ವಿಷಯದಲ್ಲಿ ಏನು ಕ್ರಮವನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆಂದು ಅರ್ಥವಾಗುತ್ತದೆ. ಈ ಬಗ್ಗೆ ಅರ್ಜಿ ಬಂದಿಲ್ಲವೆಂದು ಉತ್ತರ ಕೊಡಲಾಗಿದೆ.

ಶ್ರೀ ಡಿ. ಮುನಿಚಿನ್ನಪ್ಪ.—ಈ ಬಗ್ಗೆ ಲಿಖಿತಮೂಲಕವಾಗಿ ಮನವಿಗಳನ್ನು ಮಾಡಿಕೊಂಡಿರುವ ಸಂಬಂಧದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮ ಏನು ಎಂದು ಕೇಳಿದ್ದೇನೆ. ಆ ವಿಚಾರದಲ್ಲಿ ನಾನು ಕೇಳುತ್ತಿದ್ದೇನೆ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—(ಎ) ಭಾಗಕ್ಕೆ ಉತ್ತರವಾಗಿ 56 ಎಕರೆ ಪ್ರದೇಶದಲ್ಲಿ ನಷ್ಟವಾಗಿದೆ ಎಂದು ಹೇಳಲಾಗಿದೆ. ಈ ಸಂಬಂಧದಲ್ಲಿ ಸರ್ಕಾರ ಕೈಕೊಂಡಿರುವ ಕ್ರಮ ಏನು ಎನ್ನುವ ವಿಚಾರದಲ್ಲಿ ಸರ್ಕಾರಕ್ಕೆ ಯಾವ ಮನವಿಗಳೂ ಬಂದಿಲ್ಲವಾದ್ದರಿಂದ ಹಾಗೆ ತಿಳಿಸಿದ್ದೇವೆ. ಕೆರೆಯನ್ನು ರಿಪೇರಿ ಮಾಡುವ ವಿಷಯ ಲೊಕೋಪಯೋಗಿ ಇಲಾಖೆಯ ಮಂತ್ರಿಗಳಿಗೆ ಸಂಬಂಧಪಟ್ಟಿರುವುದರಿಂದ ಬೇರೆ ಪ್ರಶ್ನೆಯನ್ನು ಹಾಕದರೆ ಅವರು ಅದಕ್ಕೆ ಉತ್ತರವನ್ನು ಕೊಡುತ್ತಾರೆ.

Sri GANJI VEERAPPA.—Has Government done anything in the matter of giving relief ?

Sri M. V. KRISHNAPPA.—There was no loss and there was no representation to compensate that loss. That is what we have replied.

Acquisition of lands for Village Extension in Yelburga Taluk.

**Q.*—294. Sri VEERABHADRAPPA ERAPPA (Yelburga).—

Will the Government be pleased to state :—

(*a*) the number of applications received by them for the acquisition of lands for village extension in Yelburga Taluk during the last three years;

(*b*) the names of villages from which applications were received ;

(*c*) the amount paid by the residents of each one of the above villages for land acquistions ;